**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 1133/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಚೇತನ್ ವಿ |
| ತಂದೆಯ ಹೆಸರು | : | ವೀರಭದ್ರಸ್ವಾಮಿ ಕೆ ಎಂ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಮೈಸೂರು ರೈಲ್ವೆ ಪೊಲೀಸ್ ವೃತ್ತ ನಿರೀಕ್ಷಕರು, |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 28.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ಜುಲೈ 2017 ರಿಂದ ನವೆಂಬರ್ 2017 ರವರೆಗೆ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07.09.2017 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಫ್ರಾಸಾ-1 ರವರು ಠಾಣೆಗೆ ಹಾಜರಾಗಿ ನಿ.ಪಿ-1 ರಂತೆ ಲಿಖಿತ ದೂರು ನೀಡಿದ್ದು, ನಂತರ ಸದರಿ ದೂರನ್ನು ಪರಿಶೀಲಿಸಿ, ಠಾಣಾ ಮೊಕದ್ದಮೆ ಸಂಖ್ಯೆ 195/2017 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ನಿ.ಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ-4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಅದೇ ದಿವಸ ಘಟನಾ ಸ್ಥಳಕ್ಕೆ ಭೇಟಿ ನೀಡಿ

ಫ್ರಾಸಾ-1 ರವರು ತೋರಿಸಿಕೊಟ್ಟಂತೆ ಚಾಸಾ-3 ಮತ್ತು 4 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಚಾಸಾ-1 ರವರ ಮರು ಹೇಳಿಕೆ, ಚಾಸಾ-2, 3, 5 ಮತ್ತು 6 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಕಡತವನ್ನು ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಸಿ.ಎಸ್, ವಕೀಲರಿಂದಃ**

ಫ್ರಾಸಾ-1 ರವರು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಫ್ರಾಸಾ-1 ರವರು ಆಸ್ಪತ್ರೆಯಲ್ಲಿ ದಾಖಲಾಗಿದ್ದ ಆಸ್ಪತ್ರೆಯಿಂದ ಯಾವುದೇ ಸೂಚನಾ ಪತ್ರ ಬಂದಿರುವುದಿಲ್ಲ. ಫ್ರಾಸಾ-1 ರವರು 4 ದಿವಸಗಳ ನಂತರ ಠಾಣೆಗೆ ಬಂದು ದೂರು ನೀಡಿರುತ್ತಾರೆ. ಗಲಾಟೆ ನಡೆದಿರುತ್ತದೆ ಎಂದು ಹೇಳಿದ ದಿವಸ, ನಮ್ಮ ಠಾಣೆಗೆ ಮಾಹಿತಿ ನೀಡಿರುವುದಿಲ್ಲ. ದೂರನ್ನು ಫ್ರಾಸಾ-1 ರವರೆ ಬರೆದುಕೊಂಡು ತಂದಿದ್ದರು. ಫ್ರಾಸಾ-1 ರವರು ಯಾವುದೇ ದೂರನ್ನು ಬರೆದುಕೊಂಡು ತಂದಿರಲಿಲ್ಲ, ಬದಲಾಗಿ ನಮ್ಮ ಠಾಣೆಯಲ್ಲಿಯೇ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಬರೆದು ನಂತರ ಚಾಸಾ-1 ರವರ ಹೆಬ್ಬೆಟ್ಟು ಗುರುತು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಪಂಚರಿಗೆ ನೋಟಿಸ್ ನೀಡಿರುತ್ತೇನೆ. ನಾನು ಯಾವುದೇ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಠಾಣೆಯಲ್ಲಿಯೇ ಕುಳಿತು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಸಾಕ್ಷಿದಾರರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿಲ್ಲ ಮತ್ತು ಸದರಿ ಹೇಳಿಕೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ

ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರು ಸುಳ್ಳು ದೂರನ್ನು ಸೃಷ್ಟಿಸಿ, ಅದಕ್ಕೆ ಪೂರಕವಾಗಿ ಮಹಜರ್ ತಯಾರಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**